

# ಕಾಡಿನ ಕಾಮಿಡಿ ಕಿಲಾಡಿಗಳು!

ವನ್ಯಲೋಕದ ಲಘುಕ್ಷಣಗಳನ್ನು ಜಗತ್ತಿನ ಮುಂದೆ ಪ್ರಸ್ತುತಪಡಿಸುತ್ತಲೇ ವನ್ಯಜೀವಿ ರಕ್ಷಣೆಯ ಜಾಗೃತಿಯನ್ನೂ ಮೂಡಿಸುವ ಸದುದ್ದೇಶವನ್ನು 'ಕಾಮಿಡಿ ವೈಲ್ಡ್‌ಲೈಫ್ ಫೋಟೊಗ್ರಫಿ ಅವಾರ್ಡ್' ಹೊಂದಿದೆ. 2021ರ ಸ್ಪರ್ಧೆಯ ಕಣದಲ್ಲಿರುವ ಈ ಚಿತ್ರಗಳು ಎಂಥ ದುಗುಡದ ಸಮಯದಲ್ಲಿಯೂ ನಗೆಹೂವನ್ನು ಅರಳಿಸುವಷ್ಟು ಚೈತನ್ಯಶೀಲವಾಗಿದೆ. ಈ ಮುದ್ದು– ಮುಗ್ಧ ಜಗತ್ತನ್ನು ಕದಡಬೇಡಿ ಎಂದೂ ತಮ್ಮದೇ ಶೈಲಿಯಲ್ಲಿ ಹೇಳುತ್ತಿರುವ ಹಾಗೆಯೂ ಈ ಚಿತ್ರಗಳಿವೆ.

■ ಮಾಂಟೊ



ಕ್ವಾರಂಟೈನ್ ಲೈಫ್! ಮನೆಯೊಳಗೆ ಬಂಧಿಯಾಗಿರುವ ಈ ಪುಟಾಣಿಗಳಿಗೆ ಹೊರಜಗತ್ತು ಕಾಣುವ ಹಂಬಲ... ಮುದ್ದು ರಕೂನ್‌ಗಳ ಈ ಚಿತ್ರ ಕೆನಡಾದ ಕೆವಿನ್ ಬಿಸ್ಕಾಬಾರ್ನ್ ಅವರದ್ದು.